ಕಥೆಗಾರ ಅದೀಬ್ ಅಖ್ತರ್ ಮೈಸೂರಿನ ಬನ್ನೂರಿನವರು. ಮೊದಲಿಗೆ ಉರ್ದು ಭಾಷೆಯಲ್ಲಿ ಸಾಹಿತ್ಯ ಕೃಷಿ ಆರಂಭಿಸಿದ ಅವರು, ಕನ್ನಡದಲ್ಲಿ ಬರೆಯಲು ಆರಂಭಿಸಿದ್ದು ತೀರಾ ತಡವಾಗಿ. 'ಯಾರೇ ಕೂಗಾಡಲಿ', 'ಬಹುರೂಪಿ' ಅವರ ಪ್ರಮುಖ ಕೃತಿಗಳು.

ತನಗೆ ನೆಮ್ಮದಿಯಿಲ್ಲ. ತನ್ನಿಂದ ಒಂದು ಕೊಲೆ ನಡೆದು ತಾನು ಖಂಡಿತವಾಗಿಯೂ ಜೈಲು ಸೇರುತ್ತೇನೆ ಎಂದು ತನಗೆ ತಾನೇ ಹೇಳಿಕೊಳ್ಳುತ್ತಿದ್ದ.

ಶಕೀಲಾ ಮೊದಲನೇ ಬಾರಿಗೆ ಗಂಡನ ಮನೆಗೆ ಹೋದಾಗ ಕೆಂಪು ಬಟ್ಟೆ ಧರಿಸಿದ್ದಳು. ಕೆರೆಗೆ ಹಾರಿ ಪ್ರಾಣ ಕಳೆದುಕೊಂಡಿದ್ದಾಗ ಸಹ ಕೆಂಪು ಬಟ್ಟೆಯಲ್ಲಿದ್ದಳು. ಇದೊಂದು ನೋವಿನ ಸಂಗತಿಯಾಗಿತ್ತು.

ರಸೂಲ್‌ನ ಕಥೆ ಮುಗಿಸಬೇಕೆಂದು ಸಲೀಂ ಕುಡುಗೋಲನ್ನು ಕುಲುಮೆಗೆ ತೆಗೆದುಕೊಂಡು ಹೋಗಿ ತಟ್ಟಿಸಿಕೊಂಡು ಬಂದ.

ರಸೂಲ್ ಬೆಳಗ್ಗೆ ತನ್ನ ಊರಿನ ಕೆರೆಗೆ ಹೋಗಿ ಮೊಳಕಾಲಿನವರೆಗೆ ನೀರಲ್ಲಿ ನಿಂತುಕೊಂಡು ಮುಖ ತೊಳೆಯುತ್ತಿರುತ್ತಾನೆ. ಆ ಸಮಯದಲ್ಲಿ ಹಿಂದಿನಿಂದ ಅಚಾನಕ್ಕಾಗಿ ಹೋಗಿ ಒಂದೇ ಏಟಿಗೆ ಅವನ ಕತ್ತನ್ನು ಹಾರಿಸಿ ಬಿಡಬೇಕು. ಕೆರೆಯ ನೀರೆಲ್ಲಾ ಅವನ ರಕ್ತದಿಂದ ಕೆಂಪಾಗಿ ಹೋಗಬೇಕು. ಆಗಲೇ ಶಕೀಲಾಳ ಆತ್ಮಕ್ಕೆ ನೆಮ್ಮದಿ, ಶಾಂತಿ ಸಿಗುವುದು. ಶಕೀಲಾ ಕೆಂಪು ಬಟ್ಟೆ ಧರಿಸಿಕೊಂಡು ಕೆರೆಗೆ ಹಾರಿದ್ದನ್ನು ನೆನಪಿಸಿಕೊಂಡು ಕುಡುಗೋಲು ಹರಿತವಾಗಿದ್ದರೂ ಮತ್ತೊಮ್ಮೆ ತಟ್ಟಿಸಿಕೊಂಡು ಬಂದ.

ಒಂದು ಮುಂಜಾನೆ ಅರಕೆರೆಗೆ ಹೋಗುವ ವಿಚಾರದಿಂದ ಸಲೀಂಗೆ ಇಡೀ ರಾತ್ರಿ ನಿದ್ದೆ ಬರಲಿಲ್ಲ. ತಲೆಯಲ್ಲಿ ಏನೇನೋ ಯೋಚನೆಗಳು ತುಂಬಿಕೊಂಡಿದ್ದವು. ಆದರೂ ಮುಂಜಾನೆಯೆದ್ದು ಕುಡುಗೋಲನ್ನು ಒಂದು ಚೀಲದಲ್ಲಿ ಹಾಕಿಕೊಂಡು ಅದನ್ನು ಸೈಕಲಿನ ಹ್ಯಾಂಡಲ್‌ಗೆ ಸಿಕ್ಕಿಸಿಕೊಂಡು ಮನೆಯಿಂದ ಹೊರಗೆ ಬಂದ.

ಊರು ಬಿಟ್ಟು ಅರ್ಧ ದಾರಿ ಸರಿದ ಬಳಿಕ ರಸ್ತೆಯಲ್ಲಿ ಸಿಗುವ ಕೆರೆಯ ಏರಿಯ ಮೇಲೆ ನಿಂತುಕೊಂಡು ಬೇರೆ ದಿಕ್ಕಿನಲ್ಲಿ ಯೋಚಿಸತೊಡಗಿದ. ಈಗಾಗಲೇ ಮನೆಮಂದಿಯೆಲ್ಲಾ ದುಃಖದಲ್ಲಿರುವಾಗ ಒಂದು ವೇಳೆ ತಾನು ಜೈಲು ಸೇರಿಕೊಂಡರೆ ಅವರ ಬದುಕು ಏನಾಗುವುದು? ಅವರು ಇಡೀ ಜೀವನ ನರಕ ಯಾತನೆ ಅನುಭವಿಸುತ್ತಾರೆ ಎಂದು ಯೋಚಿಸಿದ.

ಕೆರೆಯ ಏರಿಯ ಮೇಲೆ ಸಲೀಂ ಅಚಾನಕ್ಕಾಗಿ ಸೈಕಲ್‌ನಿಂದ ಇಳಿದು ಯೋಚಿಸತೊಡಗಿದ. ಅದೇ ಸಮಯದಲ್ಲಿ ಅವನಿಗೆ ಅವನ ಊರಿನವನಾದ ಸೋಮು ನೆನಪಾದ. ಆಸ್ತಿಯ ಕಾರಣಕ್ಕಾಗಿ ಒಬ್ಬನನ್ನು ಕೊಲೆ ಮಾಡಿ ಆರೇಳು ವರ್ಷಗಳು ಜೈಲಿನಲ್ಲಿದ್ದು, ಬಳಿಕ ಬಿಡುಗಡೆಗೊಂಡಿದ್ದ. ಆಮೇಲೆ ಅವನು ಎಷ್ಟೊಂದು ಸೋತು ಹೋಗಿದ್ದನೆಂದರೆ ಯಾರೊಂದಿಗೂ ಸೇರುತ್ತಿರಲಿಲ್ಲ. ಕೊನೆಗೊಂದು ದಿನ ಆತ್ಮಹತ್ಯೆ ಮಾಡಿಕೊಂಡ.

ಸಲೀಂಗೆ ಸೇಡು ತೀರಿಸಿಕೊಳ್ಳುವುದರಲ್ಲಿ ಯಾವ ಅರ್ಥವೂ ಇಲ್ಲ ಎನಿಸಿತು. ಇದ್ದಕ್ಕಿದ್ದಂತೆ ಅವನು ಚೀಲದಿಂದ ಕುಡುಗೋಲನ್ನು ತೆಗೆದು ಜೋರಾಗಿ ಬೀಸಿ ಕೆರೆಯ ಮಧ್ಯ ಎಸೆದ. ಅದು ನೀರಲ್ಲಿ ಮುಳುಗಿ ಹೋಯಿತು.

ಇಂದು ಶಾಂತವಾಗಿರುವ ದ್ವೇಷ ಮುಂದೊಂದು ದಿನ ಮತ್ತೆ ಹುಟ್ಟುವುದಿಲ್ಲವೆಂದು ಯಾವ ಖಾತರಿಯೂ ಇಲ್ಲ. ಅದಕ್ಕೆ ಇಲ್ಲಿ ಇರಬಾರದು. ನಾಲ್ಕಾರು ದಿನ ಯಾವುದಾದರೂ ದೂರದ ದರ್ಗಾಕ್ಕೆ ಭೇಟಿ ನೀಡಿ, ಅಲ್ಲಿದ್ದು ಹೊಸ ಮನುಷ್ಯನಾಗಿ ಬರಬೇಕು ಎಂದು ಹೀಗೆ ಯೋಚಿಸಿದ. ಹಿಂತಿರುಗಿ ಅವನು ಮನೆಗೆ ಬಂದು ನಾನು ದೂರದ ದರ್ಗಾಕ್ಕೆ ಹೋಗುತ್ತಿದ್ದೇನೆ ಎಂದು ಮನೆಯವರಿಗೆ ಹೇಳಿದಾಗ ಅವರು ಹೋಗಿ ಬಾ ಎಂದರು.

ಅವನು ಶಿವನಸಮುದ್ರಕ್ಕೆ ಹೊರಟು ನಿಂತ. ಎತ್ತರದಲ್ಲಿರುವ ದರ್ಗಾದ ಬಳಿ ನಿಂತುಕೊಂಡು ಇನ್ನೊಂದು ಕಡೆ ಎತ್ತರದಿಂದ ಬೀಳುತ್ತಿರುವ ಜಲಪಾತವನ್ನು ತುಂಬಾ ಹೊತ್ತಿನವರೆಗೆ ನೋಡಿದ. ನೀರಿಗಿಳಿದು ಯಾವ ಅವಸರವಿಲ್ಲದೆ ಸ್ನಾನ ಮಾಡಿದ. ನಾಲ್ಕಾರು ದಿನ ಅಲ್ಲಿದ್ದು ಅಲ್ಲಿರುವ